O.S. NO. 16/2018
PW – 2.
Dated 15–06–2026.

ಸಾಕ್ಷಿಯನ್ನು ಈ ದಿನ ದಿನಾಂಕ 15–06–2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 1, 3 ಮತ್ತು 4 ನೇ ಪ್ರತಿವಾದಿಯರ ಪರವಾಗಿ ಶ್ರೀ ಎಸ್ ವಿ ಎಸ್ ವಕೀಲರಿಂದಃ

ನನ್ನ ತಂದೆಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ದೈಹಿಕವಾಗಿ ಸದೃಡವಾಗಿದ್ದರು ಖೊಟ್ಟಿ ಪವರ ಆಪ ಅಟಾರ್ನಿ ತಂದು ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ರಸ್ತೆ ಅಪಘಾತದಲ್ಲಿ ಗಾಯಗಳು ಆಗಿದ್ದರು ಸಹ ಈಗ ಸಂಪೂರ್ಣ ಗುಣಮುಖನಾಗಿದ್ದು ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಸಮರ್ಥರಿರುತ್ತಾರೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳು ಯಾರಿಂದ ಬಂದಿರುತ್ತವೆ ಎಂದು ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಅದು ನನ್ನ ತಂದೆಗೆ ಮಾತ್ರ ಮಾಹಿತಿ ಇದೆ ಎಂದರೆ ಸರಿಯಲ್ಲ. ನನ್ನ ತಂದೆ ಪ್ರತಿವಾದಿಗಳೊಂದಿಗೆ ಸಾಕಷ್ಟು ಸಲ ನ್ಯಾಯಾಲಯದ ಹೊರಗೆ ರಾಜಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಆಸ್ತಿ ಪಡಯ ಬೇಕೆಂದ ದುರುದ್ದೇಶದಿಂದ ನನ್ನ ತಂದೆಯಿಂದ ಖೊಟ್ಟಿ ಪವರ ಆಪ ಅಟಾರ್ನಿ ಪಡೆದು ತಂದು ಹಾಜರು ಪಡಿಸಿ ಖೊಟ್ಟಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಅಪಘಾತ ದಲ್ಲಿ ಗಾಯಗಳು ಆಗಿ ಅವರಿಗೆ ನಡೆದಾಡಲು ಬರುವುದಿಲ್ಲ ಎನ್ನುವದಕ್ಕೆ ವೈದ್ಯರ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಮಾಡಿದ್ದೆನೆ. ಈ ಮಾತು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

O.S. NO. 16/2018
PW - 2.
Dated 15-06-2026.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.